

# ಕಲಾಸಕ್ತರ ಕನಸು ಸಾಕಾರ

ಢಾಕಾದ ಪ್ರೋಮಿತಿ ಹುಸೇನ್ ತಮ್ಮ ಕಲಾಕೃತಿ ಜೊತೆಗೆ

**ಚಿತ್ರಕಲಾವಿದರ ಅಧ್ಯಯನ ಹಾಗೂ ಕಲೆಯ ಪೋಷಣೆಗೆ ಬಳ್ಳಾರಿಯ ಜೆಎಸ್‌ಡಬ್ಲ್ಯು ಫೌಂಡೇಷನ್ ಮುಂದಾಗಿದೆ. ಹಂಪಿ ಸಮೀಪ ಸುಸಜ್ಜಿತ ‘ಹಂಪಿ ಆರ್ಟ್ ಲ್ಯಾಬ್’ ನಿರ್ಮಿಸಿ ಅನಾವರಣಗೊಳಿಸುವ ಮೂಲಕ ಜಾಗತಿಕ ಮಟ್ಟದಲ್ಲಿ ಕಲಾವಿದರ ಕನಸನ್ನು ಸಾಕಾರಗೊಳಿಸುತ್ತಿದೆ.**

**■ ಉಮಾ ಅನಂತ್**

ತುಂಗಭದ್ರಾ ನದಿಯ ತಟದಲ್ಲಿ ಕಂಗೊಳಿಸುವ ಪಾರಂಪರಿಕ ತಾಣ ಹಂಪಿ, ವಿಜಯನಗರ ಸಾಮ್ರಾಜ್ಯದ ರಾಜರ ಆಳ್ವಿಕೆಯ ಕುರುಹನ್ನು ಉಳಿಸಿ ಇಂದಿಗೂ ವಿಶ್ವಮಾನ್ಯತೆ ಪಡೆದಿರುವುದು ಹೊಸ ಸಂಗತಿಯಲ್ಲ. ಆದರೆ ಇದೇ ನೆಲೆಯಲ್ಲಿ ಜಾಗತಿಕ ಗುಣಮಟ್ಟದ ‘ಹಂಪಿ ಆರ್ಟ್ ಲ್ಯಾಬ್’ ತಲೆಯೆತ್ತಿದ್ದು, ಜಗತ್ತಿನಾದ್ಯಂತ ಇರುವ ಕಲಾವಿದರನ್ನು ಕೈಬೀಸಿ ಕರೆಯುತ್ತಿದೆ.

ದಕ್ಷಿಣ ಭಾರತದ ಹಂಪಿಯ ಯುನೆಸ್ಕೊ ವಿಶ್ವ ಪಾರಂಪರಿಕ ತಾಣದ ಬಳಿಯೇ ಈ ಹಂಪಿ ಆರ್ಟ್ಸ್ ಲ್ಯಾಬ್ ವಿಶಿಷ್ಟ ರೀತಿಯ ವಿನ್ಯಾಸದೊಂದಿಗೆ ರೂಪುಗೊಂಡಿದೆ. ಇಲ್ಲಿ ಸಮಕಾಲೀನ ಕಲೆಯ ಅಧ್ಯಯನ, ಬೆಳವಣಿಗೆಗಾಗಿ ಕಲಾವಿದರಿಗೆ ವಿಶ್ವದರ್ಜೆಯ ಸೌಲಭ್ಯ ಒದಗಿಸಲಾಗಿದೆ. ಜೆಎಸ್‌ಡಬ್ಲ್ಯು ಫೌಂಡೇಷನ್‌ನ ಮುಂದಾಳತ್ವದಲ್ಲಿ ಸಾಕಾರಗೊಂಡಿರುವ ಈ ಆರ್ಟ್ ಲ್ಯಾಬ್ ಚಿತ್ರಕಲೆಯಲ್ಲಿ ಆಸಕ್ತರಾದವರ ಪ್ರತಿಭೆಯ ಪೋಷಣೆಗೆ ಉಚಿತ ಅವಕಾಶ ನೀಡಿದೆ. ಮುಂದೆ ಜೀವನ ರೂಪಿಸುವ ಅವಕಾಶವನ್ನೂ ಕಲ್ಪಿಸಿದೆ.

ಈ ಆರ್ಟ್ ಲ್ಯಾಬ್, ಒಟ್ಟು 9 ಎಕರೆ ಪ್ರದೇಶದಲ್ಲಿ ನಿರ್ಮಾಣಗೊಂಡಿದ್ದು, ಕಲಾವಿದರಿಗೆ ಎಲ್ಲ ಸೌಲಭ್ಯ ಕಲ್ಪಿಸಲಾಗಿದೆ; ಕ್ರಿಯಾಶೀಲ ಪರಿಸರ, ಜಾಗತಿಕ ಮಟ್ಟದ ಪ್ರದರ್ಶನಕ್ಕಾಗಿ ಗ್ಯಾಲರಿ ತೆರೆಯಲಾಗಿದೆ. ಪ್ರದರ್ಶನ ಸ್ಥಳ, ಸ್ಟುಡಿಯೊ, ಕೊಠಡಿಗಳು, ವಸತಿ ಸಮುಚ್ಚಯವನ್ನೂ ನಿರ್ಮಿಸಲಾಗಿದ್ದು, ಕಲಾವಿದರ ಪ್ರತಿಭೆಯ ಸಂಪೂರ್ಣ ಅನಾವರಣಕ್ಕೆ ಆಸ್ಪದ ಮಾಡಿಕೊಡಲಾಗಿದೆ.

ಈ ಆರ್ಟ್ ಲ್ಯಾಬ್ ರೂಪುಗೊಂಡಿರುವುದರ ಹಿಂದೆ ಕುತೂಹಲಕರ ಹಿನ್ನೆಲೆಯಿದೆ. ಇದನ್ನು ಥೀಮ್ ಆಧರಿತ ಕಲಾಸಂಸ್ಥೆಯಾಗಿ ರೂಪಿಸಲಾಗಿದೆ. 14ರಿಂದ 16ನೇ ಶತಮಾನದವರೆಗೆ ಪ್ರವರ್ಧಮಾನಕ್ಕೆ ಬಂದಿದ್ದ ಕಲೆ, ವಾಸ್ತುಶಿಲ್ಪ, ಸಾಹಿತ್ಯ, ಪ್ರಾಚೀನ ದೇವಾಲಯ ಮುಂತಾದ ಪರಿಕಲ್ಪನೆಗಳಿಂದ ಪ್ರೇರಿತವಾಗಿ, ಅದೇ ತತ್ವದ ಮೇಲೆ ಈ ಸಂಸ್ಥೆಯನ್ನು ರೂಪಿಸಲಾಗಿದೆ. ಈ ತಾಣದ ಇಕ್ಕೆಲಗಳಲ್ಲಿ ಹಂಪಿಯ ‘ಐಡೆಂಟಿಟಿ’ ಎಂದೇ ಸಾರಲಾಗುವ ಕಥೆ ಹೇಳುವ ದೊಡ್ಡ ದೊಡ್ಡ ಬಂಡೆಗಳ ಮಧ್ಯೆ ನೆಲೆ ನಿಂತಿರುವುದು ಇದರ ಸೌಂದರ್ಯಕ್ಕೆ ಪ್ಲಸ್ ಪಾಯಿಂಟ್ ಎನ್ನಬಹುದು.

ಮುಂಬೈ ಮೂಲದ ಪ್ರಮುಖ ವಾಸ್ತುಶಿಲ್ಪಿ ಮತ್ತು ಅಹಮದಾಬಾದ್‌ನ ಸಿಇಪಿಟಿ ವಿಶ್ವವಿದ್ಯಾಲಯದ ಆರ್ಕಿಟೆಕ್ಚರ್ ವಿಭಾಗದ ಡೀನ್ ಸಮೀಪ್ ಪಡೋರಾ ಅವರ

## ಹಂಪಿ ಆರ್ಟ್ ಲ್ಯಾಬ್

